# ನಕ್ಕುಬಿಡಿ



ಗುಂಡ: ಡಾಕ್ಟ್ರೇ ಯಾವಾಗ್ಲೂ ನಿದ್ರೆ ಬರ್ತಾ ಇರುತ್ತೆ.
ಡಾಕ್ಟರ್: ಯಾವ ಮೊಬೈಲ್ ಬಳಸ್ತೀರಾ?
ಗುಂಡ: ನೋಕಿಯಾ ಬೆಸಿಕ್ ಮಾಡಲ್.
ಡಾಕ್ಟರ್: ಸರಿ, ಒಂದು ಸ್ಮಾರ್ಟ್‌ಫೋನ್ ಬರೆದು ಕೊಡ್ತೀನಿ. ಜಿಯೊ ಸಿಮ್ ಹಾಕಿ ಫೇಸ್‌ಬುಕ್, ವಾಟ್ಸ್ಆ್ಯಪ್, ಇನ್‌ಸ್ಟಾಲ್ ಮಾಡಿಕೊಳ್ಳಿ. ಎಲ್ಲಾ ಸರಿಹೋಗುತ್ತೆ.

ಡಾಕ್ಟರ್: ನಿಮ್ಮ ಗಂಡನಿಗೆ ಮೂರ್ಛೆ ಹೋಗುವಂಥದ್ದು ಏನಾಯಿತು?
ಹೆಂಡತಿ: ಡಾಕ್ಟ್ರೇ ಇವತ್ತು ಅಡುಗೆಯವಳು ಬಂದಿಲ್ಲ ನಾನೇ ನನ್ನ ಕೈಯಾರೆ ನಿಮಗೆ ಅಡುಗೆ ಮಾಡ್ತೀನಿ ಅಂದೆ ಅಷ್ಟೇ..!

ಗುಂಡ: (ಫೋನಿನಲ್ಲಿ) ಹಲೋ ಡಾಕ್ಟ್ರೆ. ನನ್ನ ಹೆಂಡತಿ ಹೊಟ್ಟೆ ನೋವಿನಿಂದ ಒದ್ದಾಡುತ್ತಿದ್ದಾಳೆ. ಅಪೆಂಡಿಸೈಟಿಸ್ ಆಪರೇಷನ್ ಮಾಡಬೇಕು ಅನ್ನುತ್ತೆ..
ಡಾಕ್ಟರ್: ಏನ್ ಮಾತಾಡ್ತಿದ್ದೀರಾ? ನೀವೇ ಡಾಕ್ಟರ್ ಅಂತ ತಿಳಿದುಕೊಂಡ್ರಾ? ನಾನೇ ನಿಮ್ಮ ಹೆಂಡತಿಗೆ ಒಂದು ವರ್ಷದ ಕೆಳಗೆ ಅಪೆಂಡಿಸೈಟಿಸ್ ಆಪರೇಷನ್ ಮಾಡಿದ್ದೆ. ಪ್ರಪಂಚದಲ್ಲಿ ಯಾರಿಗೂ ಎರಡೆರಡು ಅಪೆಂಡಿಸೈಟಿಸ್ ಇರಲ್ಲಾ.
ಗುಂಡ: ನೀವು ಹೇಳುವುದು ನಿಜ ಡಾಕ್ಟ್ರೆ. ಆದ್ರೆ ಪ್ರಪಂಚದಲ್ಲಿ ಯಾರಿಗೂ ಎರಡು ಹೆಂಡ್ತಿ ಇರಬಾರದು ಅಂತೇನಿಲ್ಲವಲ್ಲ!

ತಿಮ್ಮ ಮತ್ತು ಅವನ ಹೆಂಡತಿ ಡೈವೋರ್ಸ್ ಪಡೆದರು. ನ್ಯಾಯಾಧೀಶರು ಅವನ ಸಂಬಳದ ಅರ್ಧ ಭಾಗ ಆಕೆಗೆ ನೀಡುವಂತೆ ಆದೇಶಿಸಿದರು. ಅದನ್ನು ಕೇಳಿದ ತಿಮ್ಮ ಕುಣಿದು ಕುಪ್ಪಳಿಸಿದ. ನ್ಯಾಯಾಧೀಶರು, 'ಏಕಿಷ್ಟು ಸಂತೋಷ' ಎಂದರು. ಅದಕ್ಕೆ ಗುಂಡ, 'ಇನ್ನು ಮೇಲೆ ನನ್ನ ಸಂಬಳದ ಅರ್ಧ ಭಾಗ ನನಗೂ ಸಿಗುತ್ತದಲ್ಲ ಅದಕ್ಕೆ' ಎಂದ.

ಗಂಡನ ಮೇಲೆ ಕೋಪಿಸಿಕೊಂಡು ತವರು ಮನೆಯಲ್ಲಿ ಇದ್ದ ಹೆಂಡತಿ ಮತ್ತೆ ಗಂಡನ ಮನೆಗೆ ಹೊರಡಲು ತಯಾರಾಗುತ್ತಾಳೆ.
ಆಗ ಅವಳಪ್ಪ, 'ಏನಮ್ಮಾ, ನಿನ್ನ ತಪ್ಪು ನಿನಗೆ ತಿಳಿಯಿತಾ?' ಎಂದು ಕೇಳುತ್ತಾರೆ.
ಆಗ ಮಗಳು 'ನಿಜ ತಿಳಿಯಿತು ಅಪ್ಪಾ. ಇಲ್ಲಿ ಇದ್ದರೆ, ನನ್ನ ಕೆಲಸಗಳನ್ನು ನಾನೇ ಮಾಡಿಕೊಳ್ಳಬೇಕು. ಅಲ್ಲಿ ಇದ್ದರೆ ಎಲ್ಲಾ ಕೆಲಸಗಳನ್ನು ನಮ್ಮ ಯಜಮಾನರೇ ಮಾಡುತ್ತಾರೆ.'

ಗಂಡ: ಏನಾಯಿತು ಕಣೇ?
ಹೆಂಡತಿ: ಕತ್ತು ನೋವು ರೀ.
ಗಂಡ: ಮಾರ್ಕೆಟ್‌ಗೆ ಹೋಗ್ತಿದ್ದೀನಿ, ಕತ್ತಿಗೆ ಏನಾದರೂ ತರಲೇ?
ಹೆಂಡತಿ: ಹೂಂ... ಒಂದು ನೆಕ್ಲೇಸ್ ತಗೊಂಡು ಬನ್ನಿ.

ಟೀಚರ್: ಶಂಕುಸ್ಥಾಪನೆ ಎಂದರೇನು?
ಗುಂಡ: ಒಳ್ಳೆ ಕಾರ್ಯಗಳಿಗೆ 'ದೊಡ್ಡವರು' ಬಂದು ಕಲ್ಲು ಹಾಕುವುದು ಮಿಸ್.

ಹೆಂಡತಿ: ರೀ, ಮದುವೆಯಾದ ಹೊಸತರಲ್ಲಿ ನೀವು ನನಗೆ ದಿನವೂ ಊಟ ಮಾಡುವಾಗ ಪ್ರೀತಿಯಿಂದ ಒತ್ತಾಯಮಾಡಿ ತಿನ್ನಿಸುತ್ತಿದ್ದಿರಿ. ಈಗ ಯಾಕ್ರೀ ನಿಲ್ಲಿಸಿ ಬಿಟ್ಟಿದ್ದೀರಿ?
ಗಂಡ: ಈಗ ನೀನು ಚೆನ್ನಾಗಿ ಅಡುಗೆ ಮಾಡಕ್ಕೆ ಕಲ್ತಿದ್ದೀಯಾ ಅದಕ್ಕೆ.

(ಸಂಗ್ರಹ) ಶರದ ಕುಲಕರ್ಣಿ, ಬೀದರ್


ಸಂಧಿಲಿನ್
SANDHILIN सन्धिलिन
ಗಂಟು ನೋವು, ಬೆನ್ನು ನೋವು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ
ನೋವಿಗೆ ಶೀಘ್ರ ಪರಿಣಾಮಕಾರಿ
CLINICALLY PROVED




- ಜಿಡ್ಡು ರಹಿತ 'ಸಂಧಿಲಿನ್' ಎಣ್ಣೆಯನ್ನು ಆಯುರ್ವೇದದ ಋಷಿಮುನಿಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಇದು ಗಂಟುನೋವು, ಬೆನ್ನುನೋವು, ಉಳುಕು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ ನೋವುಗಳಿಗೆ ಪರಿಣಾಮಕಾರಿ.
- ತ್ವಚೆಗೆ ಹಿತಕರವಾಗಿದ್ದು ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು
SDM AYURVEDA PHARMACY
ISO / GMP CERTIFIED
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com
ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ.